ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ:2292/2013

ಚಾಸಾ:1 ಪ್ರಾಸಾ:3

ದಿನಾಂಕ: 01-07-2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ರೇವತಿ |
| ತಂದೆಯ ಹೆಸರು | : | ನಾರಾಯಣ ಶೆಟ್ಟಿಗಾರ್ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಪಿ ಐ |
| ವಾಸ ಸ್ಥಳ | : | ಕಿಕ್ಕೇರಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ: (ವಿ.ಸಿ ಮೂಲಕ) ದಿ: 14-02-2025ರ ಆದೇಶದಂತೆ**

ನಾನು 15-10-2012 ರಿಂದ 30-09-2013ರವರೆಗೆ ಕುಂದಾಪುರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ: 30-03-2013 ರಿಂದ 27-04-2013ರವರೆಗೆ ಹೆಚ್ಚುವರಿ ಪ್ರಭಾರಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 21-07-2013 ರಂದು ಕುಂದಾಪುರ ಪೊಲೀಸ್ ಠಾಣಾ ಸಿಬ್ಬಂದಿಯವರಾದ ಚಾಸಾ-14 ಮತ್ತು 15 ರವರೊಂದಿಗೆ ಇಲಾಖಾ ವಾಹನದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಬಾತ್ಮಿದಾರರಿಂದ ದೂರವಾಣಿ ಕರೆ ಬಂದಿದ್ದು, ತಲ್ಲೂರು ಬಸ್ಸು ನಿಲ್ದಾಣದ ಬಳಿ ಇಬ್ಬರು ಕೈಯಲ್ಲಿ ಪ್ಲಾಸ್ಟಿಕ್ ಚೀಲವನ್ನು ಹಿಡಿದು ಅನುಮಾನಸ್ಪದವಾಗಿ ನಿಂತುಕೊಂಡಿರುವುದಾಗಿ ಮಾಹಿತಿ ನೀಡಿದ್ದು, ಸದ್ರಿ ಮಾಹಿತಿಯಂತೆ ಬೆಳಗ್ಗೆ 9-30 ಗಂಟೆಗೆ ತಲ್ಲೂರು ಬಸ್ಸು ನಿಲ್ದಾಣದ ಬಳಿ ಹೋದಾಗ ಬಸ್ಸು ನಿಲ್ದಾಣದ ಹಿಂಬದಿಯಲ್ಲಿ ಇಬ್ಬರು ವ್ಯಕ್ತಿಗಳು ನಿಂತುಕೊಂಡಿದ್ದು, ನಾವು ರಾ.ಹೆದ್ದಾರಿಯಲ್ಲಿ ಇಲಾಖಾ ವಾಹನವನ್ನು ನಿಲ್ಲಿಸಿ ಬಸ್ಸು ನಿಲ್ದಾಣದ ಹಿಂದೆ ಹೋದಾಗ ಸಮವಸ್ತ್ರದಲ್ಲಿ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು, ನಾನು ಮತ್ತು ಸಿಬ್ಬಂದಿಗಳ ಸಹಾಯದಿಂದ ಅವರನ್ನು ಹಿಡಿದು ವಿಚಾರಿಸಲಾಗಿ ಸದ್ರಿಯವರಲ್ಲಿ ಒಬ್ಬ ಗೋಪಾಲಕೃಷ್ಣ ಎಂದು ಮತ್ತೊಬ್ಬರು ಶೇಖರ ಎಂದು ತಿಳಿಸಿರುತ್ತಾರೆ.

ಸಿಬ್ಬಂದಿಯವರ ಮೂಲಕ ಪಂಚರಾದ ಚಾಸಾ-5 ಮತ್ತು 6ರವರ ಸಮಕ್ಷಮ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ ಇನ್ ಟೆಕ್ಸ ಮೊಬೈಲು -1, ಮೊಬೈಲು ಚಾರ್ಜರ್ -1, ಕಪ್ಪು ಪರ್ಸ್ -1, ಬ್ಯಾಟರಿ -1, ಮಂಗಳ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿಯಲ್ಲಿ ಶಶಿಕಲಾರವರ ಖಾತೆಗೆ ಹಣ ಕಟ್ಟಿದ ರಶೀದಿ-5, 20 ರೂಪಾಯಿ ಹಣ, ಟಾರ್ಚ್-1, ಆಕಾಶ ನೀಲಿ ಬಣ್ಣದ ಕೊಡೆ -1. ಶೇಖರವರ ಕೈಯಲ್ಲಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲಾಗಿ ಸುಟ್ಟ ತಾಮ್ರದ ತಂತಿ ಕಂಡು

ಬಂದಿರುತ್ತದೆ. ಸಮೀಪದ ಅಂಗಡಿಯಿಂದ ತೂಕ ಮಾಡಿಸಲಾಗಿ 250 ಗ್ರಾಂ ಇದ್ದು, ಅದರ ಮೌಲ್ಯ ಸುಮಾರು 2,600/- ಆಗಿರುತ್ತದೆ. ನಂತರ ಎಲ್ಲಾ ಸ್ವತ್ತುಗಳನ್ನು ವಶಕ್ಕೆ ಪಡೆದು 9-30ರಿಂದ 10-45ರವರೆಗೂ ಪಂಚನಾಮೆ ಜರುಗಿಸಿರುತ್ತೇನೆ. ಸ್ವತ್ತು ಮತ್ತು ಆರೋಪಿತರೊಂದಿಗೆ ಠಾಣೆಗೆ ಹಿಂದಿರುಗಿ ಸರಕಾರದ ಪರವಾಗಿ ಠಾಣಾ ಅಪರಾಧ ಸಂಖ್ಯೆ 281/2013 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇಧಿಸಿಕೊಂಡಿರುತ್ತೇನೆ. ವಶಕ್ಕೆ ಪಡೆದ ಸ್ವತ್ತುಗಳನ್ನು ಸ್ವತ್ತು ಪಟ್ಟಿಗೆ ಅಳವಡಿಸಿರುತ್ತೇನೆ.

ಆರೋಪಿತರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದು 1ನೇ ಆರೋಪಿ ಕೃಷ್ಣಾರವರು ತನ್ನ ಹೆಂಡತಿ ಮನೆ ಕೋಟೆ ಬಾಗಿಲಿನಲ್ಲಿ ಕಳುವು ಮಾಡಿದ ಸ್ವತ್ತುಗಳನ್ನು ಇರಿಸಿದಾಗಿ ತಿಳಿಸಿದಂತೆ ಚಾಸಾ- 7 ಮತ್ತು 9 ರವರ ಸಮಕ್ಷಮ 1ನೇ ಆರೋಪಿ ತೋರಿಸಿದ ಜಾಗದಲ್ಲಿ ತಾಮ್ರದ ಕಾವಲಿ-1 ಮತ್ತು ಸೈಕಲು ಮನೆಯ ಒಳಗೆ ಇದ್ದು, ಹರ್ಕುಲೆಸ್ ಕಂಪೆನಿಯ ಸೈಕಲು-1ನ್ನು ಹೊರಗಿನಿಂದ ವಶಕ್ಕೆ ಪಡೆದು ಪಂಚನಾಮೆಯನ್ನು ಮಧ್ಯಾಹ್ನ 1-30 ರಿಂದ 2-30ರವರೆಗೆ ಜರುಗಿಸಿರುತ್ತೇವೆ.

ಅದೇ ದಿನ ಕೋಟೆ ಬಾಗಿಲಿನ ಶಶಿಕಲಾರವರ ಮನೆಯ ಬಳಿ ಪಂಚರಾದ ಚಾಸಾ-10 ಮತ್ತು 11 ರವರ ಸಮಕ್ಷಮ ತಕ್ಷೀರು ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 2-30 ರಿಂದ 3-10ರವರೆಗೂ ತಯಾರಿಸಲಾಯಿತು. ಜಾಗವನ್ನು ಶಶಿಕಲಾರವರೇ ತೋರಿಸಿರುತ್ತಾರೆ.

ಕಟ್ ಬೆಲ್ತೂರು ಹಾಲು ಉತ್ಪಾದಕರ ಸೊಸೈಟಿಯ ಬಳಿ ಚಾಸಾ-12 ಮತ್ತು 13 ರವರ ಸಮಕ್ಷಮ ಪಂಚನಾಮೆಯನ್ನು 1ನೇ ಆರೋಪಿ ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 3-40 ರಿಂದ 4-10ರವರೆಗೆ ಜರುಗಿಸಿರುತ್ತೇನೆ.

ನಂತರ ಪಂಚರಾದ ಚಾಸಾ-5 ಮತ್ತು 6ರವರನ್ನು ಬರಮಾಡಿಕೊಂಡು 1ನೇ ಆರೋಪಿ ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 4-30 ರಿಂದ 5-30ರವರೆಗೂ ಜರುಗಿಸಿ ಆತ ಕಳ್ಳತನ ಮಾಡಿ ಮಾರಾಟ ಮಾಡಿದ ತಾಮ್ರದ ತಂತಿಗಳನ್ನು ತೋರಿಸಿಕೊಟ್ಟಿದ್ದು 4ನೇ ಆರೋಪಿಯಿಂದ ವಶಕ್ಕೆ ಪಡೆದಿರುತ್ತೇನೆ. ಆತನ ಅಂಗಡಿ ಆದರ್ಶ ಆಸ್ಪತ್ರೆ ಬಳಿ ಇರುತ್ತದೆ. ಸದ್ರಿ ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಸ್ವತ್ತನ್ನು ವಶಕ್ಕೆ ಪಡೆದಿರುತ್ತೇನೆ. ಸದ್ರಿ ಸುಟ್ಟ ತಾಮ್ರದ ತಂತಿಯನ್ನು ತೂಕ ಮಾಡಲಾಗಿ ಅದು 4 ಕೆ.ಜಿ ಇದ್ದು ಅದರ ಮೌಲ್ಯ ಸುಮಾರು 3,000/- ಆಗಿರಬಹುದು. ಕೆಲವು ಸ್ವತ್ತುಗಳನ್ನು ಸ್ವೀಕರಿಸಿದ 4ನೇ ಆರೋಪಿಯನ್ನು ದಸ್ತಗಿರಿ ಮಾಡಲಾಯಿತು. ನಂತರ ಠಾಣೆಗೆ ಹಿಂದುರುಗಿ 1, 2 ಮತ್ತು 4ನೇ ಆರೋಪಿತರಿಗೆ ನಿಯಮಗಳನ್ನು ಪಾಲಿಸಿದ ನಂತರ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಮರುದಿನ

ದಿಃ 21-07-2013 ರಂದು ಚಾಸಾ-2 ರಿಂದ 6, 14 ರಿಂದ 16 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ 22-07-2013 ರಂದು ಕಂದಾವರದ ಮೂಡ್ಲಕಟ್ಟೆ ಎಂಬಲ್ಲಿ 3ನೇ ಆರೋಪಿ ಅಣ್ಣಪ್ಪರವನ್ನು ದಸ್ತಗಿರಿ ಮಾಡಿ 11 ನಿಯಮಗಳನ್ನು ಪಾಲಿಸಿ ಆತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ದಿಃ 24-07-2013 ರಂದು ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಧಾರಗಳು ಲಭ್ಯವಾಗಿದ್ದರಿಂದ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿಃ 03-08-2013 ರಂದು ನ್ಯಾಯಾಲಯದ ಆದೇಶದಂತೆ ಕೊಲ್ಲೂರು ಠಾಣಾ ಅಪರಾಧ ಸಂಖ್ಯೆ 33/2012, 15/2013 ರಲ್ಲಿ ಪಿ.ಎಫ್ ನಂಬ್ರ 118/2013 ಹಾಗೂ 117/2013ರಲ್ಲಿನ ಕ್ರಮ ಸಂಖ್ಯೆ 9ರಲ್ಲಿ ಒಳಗೊಂಡ ಸ್ವತ್ತುಗಳನ್ನು ಸದ್ರಿ ಠಾಣೆಗೆ ವರ್ಗಾಯಿಸಿರುತ್ತೇನೆ.

ಸಾಕ್ಷಿ ನಿವೇಧನೆ, ಪ್ರ.ವ.ವರದಿ, ದಿಃ 21-07-2013ರ 3 ಸ್ವತ್ತು ಸ್ವಾಧೀನತಾ ಪಂಚನಾಮೆ, ಸ್ಥಳ ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ರಿಂದ 7 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ರಿಂದ 7(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. 4 ಕೆ.ಜಿಯ ಸುಟ್ಟ ಟೆಲಿಫೋನ್ ತಂತಿಯನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ1 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರ ವಾಟೀ ಸವಾಲನ್ನು ನ್ಯಾಯಾಲಯದ ಕಾರ್ಯಕಲಾಪದ ಅವಧಿ ಮುಗಿದ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**